ರಸ್ತೆಗಳೂ ಮೂರು ವರ್ಷ ನಿರ್ವಹಣಾ ಯೋಜನೆಯಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಂಡು, ವಾಹನ ಸಂಚಾರ ಸುಗಮವಾಗಿಡಲು ಕ್ರಮ ಕೈಗೊಳ್ಳಲಾಗಿರುತ್ತದೆ.

ಆ) ಈ ರಾಜ್ಯ ಹೆದ್ದಾರಿಗಳಲ್ಲಿ ಭೂಮಿಯ ಭಾರ ಹೊರುವ ಸಾಮರ್ಥ್ಯಕ್ಕೆ ಸೂಕ್ತವಾದಷ್ಟು ದಪ್ಪವನ್ನು ಹೊಂದಿದ ರಸ್ತೆಗಳ ಉದ್ದಗಳನ್ನು ಮಾತ್ರ ಮರು ಡಾಂಬರೀಕರಣ ಮಾಡಲಾಗಿದೆ. ಇನ್ನುಳಿದ ಉದ್ದಗಳನ್ನು ಕೇವಲ ಗುಂಡಿ ತುಂಬಿ ವಾಹನ ಸಂಚಾರಕ್ಕೆ ಸುಗಮವಾಗಿ ಇಡಲಾಗಿದೆ. ಇಂತಹ ಭಾಗಗಳನ್ನು ಬಲಪಡಿಸಲು ಸುಮಾರು 5.00 ಕೋಟಿ ಬೇಕಾಗಬಹುದು. ಈ ಕೆಲಸವನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಸದ್ಯ ಇರುವುದಿಲ್ಲ.

ಬೈಪಾಸ್ ರಸ್ತೆಗಳ ಕಾಮಗಾರಿ

97 (165) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ಬರುವ 2ನೇ ಹಂತದ ಬೈಪಾಸ್ ರಸ್ತೆಗಳ ಕಾಮಗಾರಿಯನ್ನು ಪ್ರಾರಂಭಿಸಲು ಸರ್ಕಾರದ ಯೋಜನೆಯು ಜಾರಿಯಲ್ಲಿದೆಯೇ;

ಆ) ಹಾಗಿದ್ದರೆ, ಯಾವ ಯಾವ ಸ್ಥಳಗಳಲ್ಲಿ ಬೈಪಾಸ್ ರಸ್ತೆಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು;

ಇ) ಇದಕ್ಕೆ ತಗಲುವ ವೆಚ್ಚವೆಷ್ಟು; ಯಾವ ವರ್ಷದಲ್ಲಿ ಕಾಮಗಾರಿಯನ್ನು ಪೂರೈಸಿ ಸಂಚಾರಕ್ಕೆ ಅನುಕೂಲ ಕಲ್ಪಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದ 175 ತಾಲ್ಲೂಕು ಮುಖ್ಯ ಪಟ್ಟಣಗಳ ಜನಸಂಖ್ಯೆಯಾದಿಯಲ್ಲಿ ಗೌರಿಬಿದನೂರು 30350 ಜನಸಂಖ್ಯೆ ಹೊಂದಿದ್ದು 100ನೆಯ ಸ್ಥಾನದಲ್ಲಿದೆ. ಇದಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿದ 99 ನಗರಗಳಿಲ್ಲವಕ್ಕೂ ಇನ್ನು ಹೊರವಲಯ ರಸ್ತೆ, ವರ್ತುಲ ರಸ್ತೆಗಳನ್ನು ನಿರ್ಮಿಸಲು ಸರಕಾರಕ್ಕೆ ಸಾಧ್ಯವಾಗಿರುವುದಿಲ್ಲ. (ಇವುಗಳಲ್ಲಿ 25 ನಗರಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇದೆ) ಆದರೂ ಈಗಾಗಲೇ ಗೌರಿಬಿದನೂರಿಗೆ ಭಾಗಶಃ ಹೊರವಲಯ ರಸ್ತೆ ನಿರ್ಮಿಸಿದೆ. ಈ ಹಿನ್ನೆಲೆಯಲ್ಲಿ ಗೌರಿಬಿದನೂರು ಪಟ್ಟಣಕ್ಕೆ 2ನೇ ಹಂತದ ಬೈಪಾಸ್ ರಸ್ತೆ ನಿರ್ಮಾಣವನ್ನು ಸರಕಾರವು ಸದ್ಯ ಯೋಜಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಸಕಾಲದಲ್ಲಿ ಭೂಮಿಯ ದಾವೆಗಳ ಪೂರೈಕೆ

98 (170) ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಾದ್ಯಂತ ಕಳೆದ ಮೂರು ವರ್ಷಗಳಿಂದಲೂ ಭೂಮಿಯ ಸ್ವಾಧೀನಾನುಭವದ ದಾವೆಗಳನ್ನು ಪೂರೈಸುವ ರೈತಾಪಿ ವರ್ಗದವರ ಸಂಖ್ಯೆ ಎಷ್ಟು? ವಿವರ ಒದಗಿಸುವುದು.

ಆ) ಉಳಿದಿರುವ ದಾವೆಗಳನ್ನು ಸಕಾಲದಲ್ಲಿ ಪೂರೈಸದೇ ವಿಳಂಬ ಮಾಡುವ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು?

ಇ) ಸಕಾಲದಲ್ಲಿ ದಾವೆಗಳನ್ನು ಇತ್ಯರ್ಥಗೊಳಿಸಿ ಬಡ ರೈತಾಪಿ ವರ್ಗದವರಿಗೆ ಅನುಕೂಲ ಮಾಡಲು ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಆ) 2000ನೇ ಸಾಲಿನಲ್ಲಿ ವಿಲೇವಾರಿ ಮಾಡಲಾದ ಪ್ರಕರಣಗಳ ಸಂಖ್ಯೆ : 15
2001ನೇ ಸಾಲಿನಲ್ಲಿ ವಿಲೇವಾರಿ ಮಾಡಲಾದ ಪ್ರಕರಣಗಳ ಸಂಖ್ಯೆ : 23
2002ನೇ ಸಾಲಿನಲ್ಲಿ ವಿಲೇವಾರಿ ಮಾಡಲಾದ ಪ್ರಕರಣಗಳ ಸಂಖ್ಯೆ : 134
ಒಟ್ಟು : 172

ಆ) ಇ) ಈಗಾಗಲೇ ಎಲ್ಲ 81 ಪ್ರಕರಣಗಳಿಗೆ ಸಂಬಂಧಿಸಿದಂತೆ ಕ್ರಮ ತೆಗೆದುಕೊಳ್ಳಲಾಗಿದ್ದು ಅವುಗಳು ವಿವಿಧ ಹಂತಗಳಲ್ಲಿ ಪರಿಶೀಲನೆಯಲ್ಲಿದ್ದು ಅವುಗಳನ್ನು ಆದ್ಯತೆಯ ಮೇಲೆ ಇತ್ಯರ್ಥಪಡಿಸಲು ತಹಶೀಲ್ದಾರರಿಗೆ ಕಟ್ಟು ನಿಟ್ಟಿನ ಸೂಚನೆ ನೀಡಲಾಗಿದೆ.

ಉಪ ನೋಂದಣಾಧಿಕಾರಿಗಳು ನೋಂದಾಯಿಸಿದ ನಿವೇಶನ, ಜಮೀನುಗಳ ವಿವರ

99 (171) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಆ) ಗೌರಿಬಿದನೂರು ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಿಂದ ಉಪ ನೋಂದಣಾಧಿಕಾರಿಗಳು ನೋಂದಣಿ ಮಾಡಿರುವ ನಿವೇಶನಗಳು, ಜಮೀನುಗಳ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)

ಆ) ಈ ನೋಂದಣಿಯಿಂದ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು;

ಇ) ಈ ಆದಾಯವನ್ನು ಯಾವ ಯಾವ ಕಾರ್ಯಕ್ಕೆ ವಿನಿಯೋಗಿಸಲಾಗಿದೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಆ)

ವರ್ಷ	ನಿವೇಶನ	ಜಮೀನು	ಒಟ್ಟು
1999-2000	1174	1598	2772
2000-2001	1428	1476	2904
2001-2002	2481	1616	4097

ಆ)

	ಆದಾಯ	
ವರ್ಷ	ನಿವೇಶನಗಳಿಂದ	ಜಮೀನುಗಳಿಂದ
1999-2000	4407248	4961637
2000-2001	5235114	4378228
2001-2002	6021202	5079107

ಇ) ಸರ್ಕಾರದ ರಾಜಸ್ವ ಮೊತ್ತಕ್ಕೆ ಸೇರ್ಪಡೆಗೊಳಿಸಲಾಗುತ್ತದೆ.